# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ಹಿರಿಯೂರು

ಸಿಸಿ ನಂ. 320/2025

**ಪಿರ್ಯಾದಿಃ** ಹಿರಿಯೂರು ಗ್ರಾಮಾಂತರ ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿತರುಃ**

1. **ಸೆಂದಿಲ್ ಕುಮಾರ್**
ತಂದೆ ಗೋಪಾಲಸ್ವಾಮಿ, 43 ವರ್ಷ
2. **ಗೋವಿಂದರಾಜು**
ತಂದೆ ವೇಲು ಸ್ವಾಮಿ, 41 ವರ್ಷ

ಇಬ್ಬರ ವಾಸಃ ಮಸ್ಕಲ್ ಮಟ್ಟಿ ಗ್ರಾಮ,
ಹಿರಿಯೂರು ತಾಲ್ಲೂಕು

## ದೋಷಾರೋಪಣೆ

**ನಾನು ಶ್ರೀಮತಿ. ಸುಜಾತ ಸುವರ್ಣ.ಬಿ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಹಿರಿಯೂರು, ಈ ಮೂಲಕ ನಿಮ್ಮನ್ನು ದೋಷಾರೋಪಣೆಗೆ ಗುರಿಪಡಿಸುವುದೇನೆಂದರೆ**

ದಿನಾಂಕ 05.06.2023 ರಂದು ರಾತ್ರಿ 7.30 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಮಸ್ಕಲ್ ಮಟ್ಟಿ ಗ್ರಾಮದ ಚಾಸಾ.1 ರವರ ಮನೆಯ ಮುಂದಿನ ಖಾಲಿ ಜಾಗದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ.1 ರವರ ಮಗನು ಗಲಾಟೆ ಮಾಡಿದ ವಿಚಾರದಲ್ಲಿ ಮನೆಯ ಬಳಿ ಬಂದು ಅವರನ್ನು ಶಾಂತಿಭಂಗವುಂಟು ಮಾಡುವ ಉದ್ದೇಶದಿಂದ ಉದ್ರೇಕಿಸುವ ಸಲುವಾಗಿ ಚಾಸಾ.1 ರವರಿಗೆ ನಿನ್ನ ಮಗ ಎಲ್ಲಿದ್ದಾನೆ ಹೇಳು ನೀನೆ ಎಲ್ಲಿಯೋ ಬಚ್ಚಿಟ್ಟಿದ್ದೀಯಾ ಎಂದು ಸೂಳೇಮುಂಡೆ ಬೋಸುಡಿ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದು ಆ ಮೂಲಕ ನೀವು ಭಾ ದಂ ಸಂ ಕಲಂ 504 ಸಹವಾಚಕ 34 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು

ಆರೋಪಿಸಲಾಗಿದೆ.

2. ಮೇಲ್ಕಂಡ ದಿನಾಂಕ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧವೆಸಗುವ ಸಮಾನೋದ್ದೇಶದಿಂದ ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀವು ಸ್ವಇಚ್ಛೆಯಿಂದ ಚಾಸಾ.1 ರವರಿಗೆ ಮೈ ಕೈಗೆ ಎದೆಗೆ ಹೊಟ್ಟೆಗೆ ಕಾಲಿನಿಂದ ಹೊಡೆದು ನೋವುಂಟುಪಡಿಸಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ ದಂ ಸಂ ಕಲಂ 323 ಸಹವಾಚಕ 34 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

3. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧವೆಸಗುವ ಸಮಾನೋದ್ದೇಶದಿಂದ ಬಂದಿದ್ದು ನಿಮ್ಮಗಳ ಪೈಕಿ 2 ನೇ ಆರೋಪಿಯು ಚಾಸಾ.1 ರವರಿಗೆ ಎಳೆದಾಡಿ ಗೋಡೆಗೆ ತಳ್ಳಿ ಪ್ರಾಣ ಬೆದರಿಕೆ ಹಾಕಿದ್ದು ಆ ಮೂಲಕ ಆರೋಪಿಗಳಾದ ನೀವು ಭಾ ದಂ ಸಂ ಕಲಂ 506 ಸಹವಾಚಕ 34 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

( ಮೇಲ್ಕಂಡ ಆರೋಪದ ಮೇಲೆ ಆರೋಪಿತರಾದ ನೀವುಗಳು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಿರುತ್ತೀರೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ .)

ದಿನಾಂಕಃ 09.12.2025
ಸ್ಥಳಃ ಹಿರಿಯೂರು

(ಸುಜಾತ ಸುವರ್ಣ. ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಹಿರಿಯೂರು.